# 'ಕ್ಲೋಸಿಂಗ್ ದಿ ಗೇಟ್ಸ್ ಟು ಎಜುಕೇಷನ್:

## ವಯೊಲೇಶನ್ಸ್ ಆಫ್ ರೈಟ್ಸ್ ಆಫ್ ಮುಸ್ಲಿಂ ವುಮೆನ್ ಸ್ಟೂಡೆಂಟ್ಸ್'

ಯು.ಸಿ.ಎಲ್-ಕರ್ನಾಟಕ ಕೈಗೊಂಡ ಅಧ್ಯಯನ


**ವರದಿಯ ಸಾರಾಂಶ:**

2021ರ ಡಿಸೆಂಬರ್‌ನಲ್ಲಿ, ಏಕಾಏಕಿಯಾಗಿ ಉಡುಪಿಯ ಆರು ವಿದ್ಯಾರ್ಥಿನಿಯರಿಗೆ ತರಗತಿಗಳ ಪ್ರವೇಶವನ್ನು ನಿರಾಕರಿಸಲಾಯಿತು. ಇದರ ಬೆನ್ನಿಗೆಯೇ, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯು ದಾರಿತಪ್ಪಿಸುವಂತಹ ಆದೇಶವೊಂದನ್ನು ಫೆಬ್ರವರಿಯಲ್ಲಿ ಹೊರಡಿಸಿತು. ಇದು ಕೆಲವು ಶಿಕ್ಷಣ ಸಂಸ್ಥೆಗಳಾದರೂ ಹಿಜಾಬಿನ ಮೇಲೆ ನಿರ್ಬಂಧಗಳನ್ನು ಹೇರಬಹುದೆಂದು ಸೂಚಿಸುವಂತ್ತಿತ್ತು. ಸಂತ್ರಸ್ತ ವಿದ್ಯಾರ್ಥಿನಿಯರಲ್ಲಿ ಕೆಲವರು ನ್ಯಾಯಾಂಗದ ಮೊರೆಹೋದಾಗ, ಕರ್ನಾಟಕ ಉಚ್ಚ ನ್ಯಾಯಾಲಯವು *ರೇಶಮ್ ವಿರುದ್ಧ ಸ್ಟೇಟ್ ಆಫ್ ಕರ್ನಾಟಕ* ಪ್ರಕರಣದಲ್ಲಿ ಹಿಜಾಬ್ ಮೇಲಿನ ನಿರ್ಬಂಧಗಳನ್ನು ತನ್ನ ಮಧ್ಯಂತರ ಹಾಗೂ ಅಂತಿಮ ತೀರ್ಪಿನ ಮೂಲಕ ಎತ್ತಿಹಿಡಿಯಿತು. ಈ ತೀರ್ಪುಗಳು ಶಿಕ್ಷಣ ಸಂಸ್ಥೆಗಳಿಗೆ ಹಿಜಾಬನ್ನು ನಿಷೇಧಿಸುವುದಂತೆ ಆದೇಶಿಸುವುದಿಲ್ಲವಾದರೂ, ವಾಸ್ತವವಾಗಿ ರಾಜ್ಯದ ಹಲವಾರು ಶಿಕ್ಷಣ ಸಂಸ್ಥೆಗಳು ಹಿಜಾಬನ್ನು ನಿಷೇಧಿಸಿದವು. ಈ ಮೂಲಕ, ಹಿಜಾಬ್ ಧರಿಸುವ ಮುಸ್ಲಿಂ ವಿದ್ಯಾರ್ಥಿನಿಯರಿಗೆ ತಮ್ಮ ಶಿಕ್ಷಣ ಮತ್ತು ಹಿಜಾಬಿನ ನಡುವೆ ಕೇವಲ ಒಂದನ್ನು ಮಾತ್ರ ಆಯ್ಕೆ ಮಾಡುವಂತೆ ಒತ್ತಾಯಿಸಲಾಯಿತು.

ಈ ಕಾರಣಗಳಿಂದಾಗಿ, ಕರ್ನಾಟಕದಾದ್ಯಂತ ಮುಸ್ಲಿಂ ವಿದ್ಯಾರ್ಥಿನಿಯರು ತಮ್ಮ ಶಿಕ್ಷಣದ ಹಕ್ಕು, ಘನತೆಯ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು, ಗೌಪ್ಯತೆಯ ಹಕ್ಕು, ತಾರತಮ್ಯ ರಹಿತವಾಗಿ ಜೀವಿಸುವ ಹಕ್ಕು ಹಾಗೂ ಪ್ರಭುತ್ವವು ಸ್ವೇಚ್ಛಾನುಸಾರ ಕೈಗೊಳ್ಳುವ ಕ್ರಮಗಳ ವಿರುದ್ಧ ಹೊಂದಿರುವ ಹಕ್ಕು ಸೇರಿದಂತೆ ಅನೇಕ ಮೂಲಭೂತ ಹಕ್ಕುಗಳ ಉಲ್ಲಂಘನೆಯನ್ನು ಡಿಸೆಂಬರ್ 2021ರಿಂದ ಎದುರಿಸುತ್ತಿದ್ದಾರೆ.

ವಿದ್ಯಾರ್ಥಿನಿಯರ ಮೇಲೆ ಹೇರಲಾಗಿರುವ ಈ ನಿಷೇಧದ ಪರಿಣಾಮವನ್ನು ಅರಿಯಲು ಹಾಗೂ ಈ ಇಡೀ ಪ್ರಕರಣದಲ್ಲಿ ಅಧಿಕಾರಿಗಳ ಮತ್ತು ಪೊಲೀಸರ ಪಾತ್ರವೇನಿತ್ತು ಎಂಬುದನ್ನು ತಿಳಿಯಲು ಪಿಯುಸಿಎಲ್-ಕರ್ನಾಟಕವು ಈ ಅಧ್ಯಯನವನ್ನು ಕೈಗೊಂಡಿತು. ವಿದ್ಯಾರ್ಥಿನಿಯರು ಮತ್ತು ಅಧಿಕಾರಿಗಳೊಂದಿಗಿನ ಚರ್ಚೆಗನ್ನು ಹಾಗೂ ಘಟನಾವಳಿಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ, ಈ ಇಡೀ ಪ್ರಕರಣವು ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣದ ಹಕ್ಕನ್ನು ಕಸಿದಿತ್ತು ಮಾತ್ರವಲ್ಲ, ಅವರು ತಮ್ಮ ಸುತ್ತಮುತ್ತ ಹರಡಿದ್ದ ದ್ವೇಷ-ಹಗೆತನಗಳ; ತಪ್ಪು ಮಾಹಿತಿಗಳ ಆಗರವನ್ನೂ ಎದುರುಗೊಳ್ಳಬೇಕಾಯಿತು ಎಂಬುದು ಸ್ಪಷ್ಟವಾಗುತ್ತದೆ. ತಮಗೆ ಹತ್ತಿರದವರಾದ ಅಧ್ಯಾಪಕರಿಂದಲೂ, ಕಾಲೇಜು ಆಡಳಿತಗಾರರಿಂದಲೂ ಹಾಗೂ ಸಹಪಾಠಿಗಳಿಂದಲೂ ವಿದ್ಯಾರ್ಥಿನಿಯರು ಅವಮಾನ ಮತ್ತು ಕಿರುಕುಳವನ್ನು ಎದುರಿಸಿಬೇಕಾಯಿತು. ಹಿಂದುತ್ವ ಸಂಘಟನೆಗಳ ಪುಂಡರ ಗುಂಪುಗಳು, ಹಿಜಾಬ್ ತೊಡುತ್ತಿದ್ದ ವಿದ್ಯಾರ್ಥಿನಿಯರನ್ನು ನಿಂದಿಸುವ, ಕೇಡಿಗಳಂತೆ ಬಿಂಬಿಸುವ ಅಭಿಯಾನವನ್ನು ಹೇಗೆ ನಡೆಸಿದವು ಮತ್ತಿದನ್ನು ಕಂಡೂ ಕಾಣದ ಹಾಗೆ ಕಣ್ಮುಚ್ಚಿ

ಕುಳಿತ ಸರ್ಕಾರ ಮತ್ತು ಪೊಲೀಸರಿಂದಾಗಿ  ಈ ಮೂಲಭೂತವಾದಿ ಶಕ್ತಿಗಳಿಗೆ ಹೇಗೆ ಪ್ರೋತ್ಸಾಹ ದೊರೆಯಿತು ಎಂಬುದನ್ನು ಸಹ ಈ ಅಧ್ಯಯನ ವರದಿಯು ದಾಖಲಿಸುತ್ತದೆ.

ಈ ವರದಿಯು ಕೆಳಕಂಡ ಮೂರು ಮುಖ್ಯ ವಿಚಾರಗಳನ್ನು ದಾಖಲಿಸಿ ಅವನ್ನು ಗಂಭೀರವಾಗಿ ವಿಶ್ಲೇಷಿಸಿದೆ:

- ಶಿಕ್ಷಣ ಸಂಸ್ಥೆಗಳು ಹಿಜಾಬಿನ ಮೇಲೆ ನಿರ್ಬಂಧಗಳನ್ನು ಹೇರಿದ್ದು ಮುಸ್ಲಿಂ ವಿದ್ಯಾರ್ಥಿನಿಯರ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಿದೆ,
- ಅಧಿಕಾರಿಗಳು ಹಾಗೂ ಮುಸ್ಲಿಂ ವಿದ್ಯಾರ್ಥಿನಿಯರ ಹಕ್ಕುಗಳ ಉಲ್ಲಂಘನೆಯಲ್ಲಿ ಅವರ ಪಾತ್ರ, ಮತ್ತು
- ಮುಸ್ಲಿಂ ಸಮುದಾಯದ ವಿರುದ್ಧ, ಅದರಲ್ಲೂ ವಿಶೇಷವಾಗಿ, ಮುಸ್ಲಿಂ ಮಹಿಳೆಯರ ಬಗ್ಗೆ ನಮ್ಮ ಸಮಾಜದಲ್ಲಿ ನೆಲೆಸಿರುವ ಪೂರ್ವಾಗ್ರಹಗಳು, ತಪ್ಪೆಣಿಕೆಗಳು ಸೇರಿದಂತೆ ದ್ವೇಷೀಯ ಭಾವನೆಗಳನ್ನು ಉದ್ರೇಕಿಸಿದ ವಿವಿಧ ಸಾಮಾಜಿಕ-ಸಾಂಸ್ಕೃತಿಕ ಸಂಗತಿಗಳು

ಪಿಯುಸಿಎಲ್ - ಕರ್ನಾಟಕದ ಅಧ್ಯಯನ ತಂಡವು ರಾಜ್ಯದ ಐದು ಜಿಲ್ಲೆಗಳಾದ ಹಾಸನ, ದಕ್ಷಿಣ ಕನ್ನಡ, ಉಡುಪಿ, ರಾಯಚೂರು ಮತ್ತು ಶಿವಮೊಗ್ಗದಲ್ಲಿ ಇವುಗಳ ನೇರ ಪರಿಣಾಮವನ್ನು ಎದುರಿಸಿದ ಮುಸ್ಲಿಂ ವಿದ್ಯಾರ್ಥಿನಿಯರ ಅನುಭವಗಳನ್ನು ದಾಖಲಿಸಿದೆ. ಅದರೊಟ್ಟಿಗೆ, ಆಯಾ ಜಿಲ್ಲೆಯ ನಾಗರಿಕ ಸಮಾಜದ ಸಹಯೋಗದೊಂದಿಗೆ ತಜ್ಞರು, ಸಾಮಜಿಕ ಕಾರ್ಯಕರ್ತರು, ಪತ್ರಕರ್ತರು, ಕಾಲೇಜು ಆಡಳಿತಗಾರರು ಮತ್ತು ವಿವಿಧ ಅಧಿಕಾರಿಗಳೊಂದಿಗೆ ನಡೆಸಿದ ಚರ್ಚೆಗಳನ್ನು ಆಧರಿಸಿದ ವಿಶ್ಲೇಷಣೆಯನ್ನು ಈ ವರದಿಯು ಪ್ರಸ್ತುತಪಡಿಸುತ್ತದೆ. ನಮ್ಮೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡ ವಿದ್ಯಾರ್ಥಿನಿಯರು ಇನ್ನಷ್ಟು ಕಿರುಕುಳ ಮತ್ತು ಬೆದರಿಕೆಗೆ ಒಳಗಾಗಬಾರದು ಎಂಬ ಮುನ್ನಚೆರಿಕೆಯೊಂದಿಗೆ ಅವರ ಗುರುತುಗಳನ್ನು ಬಹಿರಂಗ ಪಡಿಸಲಾಗಿಲ್ಲ.

ಅಧ್ಯಾಯ 1 (ಟೈಮ್‌ಲೈನ್ ಆಫ್ ಇವೆಂಟ್ಸ್) ರಲ್ಲಿ, ಡಿಸೆಂಬರ್ 31, 2021 ರಿಂದ ಸರ್ವೋಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದ ಇಬ್ಬರು ನ್ಯಾಯಮೂರ್ತಿಗಳು ನೀಡಿದ ಭಿನ್ನ ತೀರ್ಪಿನವರೆಗೆ, ಹಿಜಾಬ್ ಪ್ರಕರಣಕ್ಕೆ ಸಂಭಂದಿಸಿದ ಪ್ರಮುಖ ಬೆಳವಣಿಗೆಗಳ ಅನುಕ್ರಮವನ್ನು ನೀಡಲಾಗಿದೆ.

ಅಧ್ಯಾಯ 2 ರಲ್ಲಿ, ವಿದ್ಯಾರ್ಥಿನಿಯರ ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯ ಬಗೆಗಿನ ವಿಶ್ಲೇಷಣೆಯನ್ನು ನೀಡಲಾಗಿದೆ:

- **ತಾರತಮ್ಯವಿರದ ಶಿಕ್ಷಣವನ್ನು ಪಡೆಯುವ ಹಕ್ಕು:** ಮುಸ್ಲಿಂ ವಿದ್ಯಾರ್ಥಿನಿಯರನ್ನು ತರಗತಿಗಳಿಂದ ಹೊರಗಿಟ್ಟು ಅವರಿಗೆ ಹೇಗೆ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಯಿತು ಎಂಬುದನ್ನು ವರದಿಯು ವಿಸ್ತೃತವಾಗಿ ಚರ್ಚಿಸಿದೆ. ತಮ್ಮ ಕಾಲೇಜುಗಳಲ್ಲಿಯೇ ಅನುಭವಿಸಬೇಕಾದ ಭಯ-ಅಭದ್ರತೆಯನ್ನೂ; ನೋವು-ನಷ್ಟಗಳನ್ನೂ; ತಾವು ಕಂಡಿದ್ದ ಕನಸುಗಳು ಮತ್ತು ಅವರು ಕಟ್ಟಿಕೊಂಡಿದ್ದ ವೃತ್ತಿಯಾಕಾಂಕ್ಷೆಗಳು ತಮ್ಮ ಕಣ್ಣು ಮುಂದೆಯೇ ಹೇಗೆ ಮುರಿದು ಬಿತ್ತು ಎಂಬುದನ್ನೂ; ಹಿಜಾಬ್ ಧರಿಸದ ವಿದ್ಯಾರ್ಥಿಗಳ ನಡುವಿನಲ್ಲಿ ಅವರು ಅನುಭವಿಸಿದ ಪ್ರತ್ಯೇಕತೆಯನ್ನೂ; ಮತ್ತು ಪ್ರಕರಣಕ್ಕೆ ಸಂಬಂಧಿಸಿದ ಇತರೆ ಅನುಭವಗಳನ್ನು ವಿದ್ಯಾರ್ಥಿನಿಯರು ಮೆಲುಕು ಹಾಕಿದ್ದಾರೆ.
- **ಘನತೆಯ ಹಕ್ಕು**: ಹಿಜಾಬ್ ಧರಿಸುವುದು ಮತ್ತು ಶಿಕ್ಷಣ ಮುಂದುವರಿಸುವುದು - ಈ ಎರಡರಲ್ಲಿ ಕೇವಲ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದ ಅನುಭವವು ಹೇಗೆ ತಮ್ಮ ಘನತೆಯ ಹಕ್ಕನ್ನು ಉಲ್ಲಂಘಿಸಿತ್ತು

ಎಂಬುದನ್ನು ವಿದ್ಯಾರ್ಥಿನಿಯರು ವಿವರಿಸಿದರು. ಒತ್ತಾಯಗಳಿಗೆ ಮಣಿದು ಹಿಜಾಬನ್ನು ತೆರೆದಿಟ್ಟದ್ದರಿಂದ ಎಲ್ಲರೆದುರು ಬೆತ್ತಲಾಗಿದ್ದೇನೆ ಎಂಬ ಭಾವನೆ ತಮ್ಮಲ್ಲಿ ಮೂಡಿತ್ತು ಎಂದು ಬಹಳಷ್ಟು ವಿದ್ಯಾರ್ಥಿನಿಯರು ಹಂಚಿಕೊಂಡರು. ಅಲ್ಲದೇ, ದ್ವೇಷ ಮತ್ತು ಕಿರುಕುಳಗಳಿಗೆ ವಿದ್ಯಾರ್ಥಿನಿಯರು ನಲುಗಿದರು.

- **ಖಾಸಗಿತನದ ಹಕ್ಕು** : ಮುಸ್ಲಿಂ ವಿದ್ಯಾರ್ಥಿನಿಯರ ವೈಯಕ್ತಿಕ ಆಯ್ಕೆಯ ಹಕ್ಕಗಳನ್ನು ಹೇಗೆ ಕಸಿಯಲಾಯಿತು ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ದೂರದರ್ಶನ ಮತ್ತು ಅಂತರ್ಜಾಲದಲ್ಲಿ ವಿದ್ಯಾರ್ಥಿನಿಯರ ಹೆಸರುಗಳನ್ನು ಮತ್ತು ಫೋಟೋ-ವಿಡಿಯೋಗಳನ್ನು ಬಿತ್ತರಿಸುತ್ತಾ ಮಾಧ್ಯಮಗಳು ಕಟ್ಟಿದ ನರೆಟಿವ್‌ಗಳು ವಿದ್ಯಾರ್ಥಿನಿಯರನ್ನು ಗುರಿಯಾಗಿರಿಸಿಕೊಂಡಿತ್ತು ಎಂಬುದನ್ನು ವಿದ್ಯಾರ್ಥಿನಿಯರು ಹಂಚಿಕೊಂಡರು.
- **ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು** : ಹಿಜಾಬ್ ಧರಿಸುವುದು (ಅಥವಾ ಧರಿಸದಿರುವುದು) ತಮ್ಮ ಸ್ವಾತಂತ್ರ್ಯವನ್ನು ಅಭಿವ್ಯಕ್ತಿಸುವ ಅನೇಕ ಮಾರ್ಗಗಳಲ್ಲಿ ಒಂದಾಗಿದೆ ಎಂಬ ವಿದ್ಯಾರ್ಥಿನಿಯರ ನಿಲುವನ್ನು ಇಲ್ಲಿ ದಾಖಲಿಸಲಾಗಿದೆ. ಉಡುಗೆ ಮತ್ತು ಉಡುಪುಗಳನ್ನು ಆಯ್ದುಕೊಳ್ಳುವ, ಆ ಮೂಲಕ ತಮ್ಮನ್ನು ತಾವು ಅಭಿವ್ಯಕ್ತಿಸಿಕೊಳ್ಳುವ ಸ್ವಾತಂತ್ರ್ಯವು ವೈಯಕ್ತಿಕತೆ (Individuality) ಯ ಪ್ರಮುಖ ಆಯಾಮವಾಗಿದೆ.
- **ತಾರತಮ್ಯವಿರದ ಜೀವನ ನಡೆಸುವ ಹಕ್ಕು** : ಹಿಜಾಬ್ ನಿರ್ಬಂಧಗಳಿಂದಾಗಿ ಮುಸ್ಲಿಂ ವಿದ್ಯಾರ್ಥಿನಿಯರನ್ನು ಹೊರದೂಡಲಾಯಿತು. ಅಷ್ಟುಮಾತ್ರವಲ್ಲ, ಸಕಾರಣಗಳಿಗೆ ಒಂದಷ್ಟು ಹೊಂದಾಣಿಕೆ (reasonable accomodation) ಮಾಡಿಕೊಡಿ ಎಂದು ಅವರು ವಿನಂತಿಸಲು ಸಹ ಅವಕಾಶವನ್ನು ನೀಡಲಿಲ್ಲ. ಬದಲಿಗೆ, ಕೇಸರಿ ಶಾಲು ಧರಿಸಿ ವಿದ್ಯಾರ್ಥಿಗಳು ಪ್ರತಿಭಟನೆಗಳನ್ನು ನಡೆಸುತ್ತಿದ್ದರೂ ಸಹ, ಇಡೀ 'ವಿವಾದ'ಕ್ಕೆ ಮುಸ್ಲಿಂ ವಿದ್ಯಾರ್ಥಿನಿಯರನ್ನು ಮಾತ್ರ ಹೊಣೆಗಾರರನ್ನಾಗಿಸಲಾಯಿತು ಮತ್ತವರನ್ನು ಇತರ ವಿದ್ಯಾರ್ಥಿಗಳಿಂದ ಪ್ರತ್ಯೇಕಿಸಲಾಯಿತು.
- **ಪ್ರಭುತ್ವವು ತನ್ನ ಸ್ವೇಚ್ಛಾನುಸಾರ ಕೈಗೊಳ್ಳುವ ಕ್ರಮಗಳಿಂದ ರಕ್ಷಣೆಯ ಪಡೆವ ಹಕ್ಕು:** ಜಿಲ್ಲಾಡಳಿತ ಮತ್ತು ಕಾಲೇಜು ಅಡಳಿತವು ತೆಗೆದುಕೊಂಡ ಯಾವುದೇ ಕ್ರಮಗಳು ಕಾನೂನುರೀತ್ಯ ಪ್ರಕ್ರಿಯೆಗಳನ್ನು ಅನುಸರಿಸಿರಲಿಲ್ಲ. ಅಲ್ಲದೇ, ವಿದ್ಯಾರ್ಥಿನಿಯರ ಹಿತಾಸಕ್ತಿಯನ್ನು ಮನದಲ್ಲರಿಸಿ ಒಂದಷ್ಟು ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಸಹ ಅವಕಾಶವನ್ನು ನೀಡಲಿಲ್ಲ. ಹಠಾತ್ತಾಗಿ ಹೇರಲಾದ ಹಿಜಾಬ್ ನಿರ್ಬಂಧವು ಮುಸ್ಲಿಂ ವಿದ್ಯಾರ್ಥಿನಿಯರ ಶೈಕ್ಷಣಿಕ ಜೀವನದ ಮೇಲೆ, ಅವರು ಎಲ್ಲರೊಂದಿಗೆ ಇರಿಸಿದ್ದ ಸಂಬಂಧಗಳ ಮೇಲೆ ಮತ್ತವರ ಮಾನಸಿಕ ಆರೋಗ್ಯದ ಮೇಲೆ ಅಪಾರ ಮತ್ತು ದೂರಗಾಮಿ ಪರಿಣಾಮ ಬೀರಿದೆ.

ಅಧ್ಯಾಯ 3 ರಲ್ಲಿ, ಕಾಲೇಜು ಪ್ರಾಂಶುಪಾಲರು, ಅಧಿಕಾರಿಗಳು, ಜಿಲ್ಲಾಡಳಿತ ಮತ್ತು ಮಕ್ಕಳ ಕಲ್ಯಾಣ ಸಮಿತಿ(CDC) ಸೇರಿದಂತೆ ಶಿಕ್ಷಣ ವಲಯದ ಅಧಿಕಾರವರ್ಗದ ಬಗೆಗಿನ ನಡೆಸಲಾದ ತನಿಖೆಯಲ್ಲಿ ಕಂಡುಬಂದ ಸಂಗತಿಗಳನ್ನು ಈ ಅಧ್ಯಾಯದಲ್ಲಿ ಪ್ರಸ್ತುತಪಡಿಸಲಾಗಿದೆ. ಜಿಲ್ಲಾಡಳಿತದ ಅಧಿಕಾರಿಗಳೊಂದಿಗಿನ ಚರ್ಚೆಗಳಲ್ಲಿ ಸ್ಪಷ್ಟವಾದ ಒಂದು ಸಂಗತಿಯೆಂದರೆ, ಈ ಇಡೀ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಗಳಾಗಲಿ, ಅಥವಾ ಅಧಿಕಾರಿಗಳು ನೀಡಿದ ಸೂಚನೆಗಳಾಲಿ, ಆದೇಶಗಳಾಗಲಿ ಲಿಖಿತ ರೂಪದಲ್ಲಿರದೆ, ಮೌಖಿಕವಾಗಿದ್ದವು. ಅದು ಹಿರಿಯ ಅಧಿಕಾರಿಗಳು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನೀಡಿದ ಸೂಚನೆಗಳಿರಬಹುದು ಅಥವಾ ಜಿಲ್ಲೆಯ ಅಧಿಕಾರಿಗಳು ಕಾಲೇಜುಗಳಿಗೆ ನೀಡಿದ ಆದೇಶಗಳೇ ಇರಬಹುದು. ಇವಾವುದೂ ಲಿಖಿತ ರೂಪದಲ್ಲಿಲ್ಲ. ಮುಸ್ಲಿಂ ವಿದ್ಯಾರ್ಥಿನಿಯರ ಮತ್ತು ಅವರ ಪೋಷಕರ 'ಮನವೊಲಿಸಿದ್ದು'; ಮುಸ್ಲಿಂ ಸಮುದಾಯ ಹೊತ್ತು ತರುತ್ತಿದ್ದ ಕುಂದುಕೊರತೆಗಳನ್ನು, ಮನವಿಗಳನ್ನು, ದೂರುಗಳನ್ನು

ದಾಖಲಿಸಲು ಅವರು ನಿರಾಕರಿಸಿದ್ದು; ಮತ್ತು ಮುಸ್ಲಿಂ ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡಿದ ಹಿಂದುತ್ವ ಗುಂಪುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವರು ನಿರಾಕರಿಸಿದ್ದು; ಇವೆಲ್ಲವೂ ಮುಸ್ಲಿಮರ ಬಗ್ಗೆ ಅವರಿಗಿದ್ದ ಪೂರ್ವಾಗ್ರಹಗಳನ್ನೂ, ಅವರು ಅನುಸರಿಸಿದ ಪಕ್ಷಪಾತಿತನವನ್ನೂ ಬಹಿರಂಗಪಡಿಸಿತು. ಕಾಲೇಜು ಆಡಳಿತಾಧಿಕಾರಿಗಳು ಸಹ ನಮಗೆ ಕಟ್ಟುನಿಟ್ಟಿನ ಆದೇಶಗಳು ಬಂದಿದ್ದವು ಎಂದೂ, ಆದ್ದರಿಂದಲೇ ಹಿಜಾಬ್ ನಿಷೇಧವನ್ನು ತಕ್ಷಣವೇ ಜಾರಿಗೊಳಿಸಬೇಕಾಯಿತು ಎಂದೂ ತಿಳಿಸಿದರು. ಕಾಲೇಜು ಆಡಳಿತಗಳು ಕೂಡ ವಿದ್ಯಾರ್ಥಿನಿಯರಿಗೆ ಅಗೌರವವನ್ನು ತೋರುತ್ತಲೇ, ತಿರಸ್ಕಾರ ಮನೋಭಾವದಿಂದಲೇ ನಡೆಸಿಕೊಂಡಿವೆ.

ಅಧ್ಯಾಯ 4 ರಲ್ಲಿ ಈ ಇಡೀ ಪ್ರಕರಣದಲ್ಲಿ ಪೊಲೀಸರ ಪಾತ್ರವನ್ನೂ, ಮುಸ್ಲಿಂ ವಿದ್ಯಾರ್ಥಿ ಯರನ್ನು ಗುರಿಯಾಗಿರಿಸಿಕೊಂಡಿದ್ದ ದ್ವೇಷದ ವಾತಾವರಣವನ್ನು ಇದು ಹೇಗೆ ಬಲಪಡಿಸಿತು ಎಂಬುದನ್ನು ವಿವರಿಸಲಾಗಿದೆ. ತಮ್ಮ ಕರ್ತವ್ಯದ ಎಲ್ಲೆಗಳನ್ನೂ ಮೀರಿ, ಕಾಲೇಜು ಆವರಣಗಳನ್ನು ಪ್ರವೇಶಿಸಿ; ಹಿಜಾಬನ್ನು ತೆಗೆಯುವಂತೆ ವಿದ್ಯಾರ್ಥಿನಿಯರನ್ನು ಒತ್ತಾಯಿಸಿ; ಹಿಜಾಬ್ ಧರಿಸಿರುವ ಮುಸ್ಲಿಂ ವಿದ್ಯಾರ್ಥಿನಿಯರ ಚಿತ್ರಗಳು ಮತ್ತು ವೀಡಿಯೋಗಳನ್ನು ಪೋಲಿಸರು ಚಿತ್ರೀಕರಿಸಿದ್ದರು. ಆದರೆ, ವಿದ್ಯಾರ್ಥಿನಿಯರು ಎದುರಿಸುತ್ತಿದ್ದ ಕಿರುಕುಳವನ್ನು ತಡಯಲು ಪ್ರಯತ್ನವನ್ನೂ ನಡೆಸದೆ; ದುಸ್ಥಿತಿಯಲ್ಲಿದ್ದ ಸಮುದಾಯವು ಎದುರಿಸುತ್ತಿದ್ದ ತೊಂದರೆಗಳನ್ನು ಆಲಿಸದೆ ಅಸಡ್ಡೆ ತೋರಿದ, ಅವುಗಳನ್ನು ಬಗೆಹಿರಿಸುವ ಪ್ರಯತ್ನವನ್ನೂ ಸಹ ನಡೆಸದ ನಿರ್ದಯಿ ಪೊಲೀಸರು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಮುಸ್ಲಿಂ ಸಮುದಾಯದಿಂದ ಕೇಳಿಬರುತ್ತಿದ್ದ ಭಿನ್ನಮತೀಯ ದನಿಯನ್ನು ಅಪರಾಧವೆಂದು ಪರಿಗಣಿಸಿ ಪೊಲೀಸರು ಹಲವಾರು ಎಫ್‌ಐಆರ್‌ಗಳನ್ನು ಸಹ ದಾಖಲಿಸಿದ್ದಾರೆ. ಈ ಮೂಲಕ ಸಾಂವಿಧಾವು ಎಲ್ಲರಿಗೆ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಮುಸ್ಲಿಂ ಸಮುದಾಯಕ್ಕೆ ನಿರಾಕರಿಸಿದ್ದಾರೆ.

ಅಧ್ಯಾಯ 5 ರಲ್ಲಿ ಹಿಜಾಬ್ ಬಗೆಗಿನ ಚರ್ಚೆಗಳನ್ನು ಲಿಂಗ, ಧರ್ಮ ಮತ್ತು ಸಬಲೀಕರಣದ ಬಗೆಗಿನ ಚರ್ಚೆಗಳ ಹಿನ್ನಲೆಯಲ್ಲಿರಿಸಿ, ಮುಸ್ಲಿಂ ಮಹಿಳೆಯರು ದೂರದೃಷ್ಟಿಯೊಂದಿಗೆ ತಮ್ಮದೇ ಆದ ಒಂದು ವಿಶಿಷ್ಟ ಅಸ್ಮಿತೆಯನ್ನು ಕಂಡುಕೊಂಡು ಅದನ್ನು ದೃಢವಾಗಿ ಪ್ರತಿಪಾದಿಸಲು ವಿವಿಧ ಮಾರ್ಗಗಳನ್ನು ಕಂಡುಕೊಂಡಿದ್ದಾರೆ ಎಂಬುದನ್ನು ತೋರಿಸುತ್ತದೆ. ಈ ಅಧ್ಯಾಯವು ಹಿಜಾಬ್‌ಗೆ ಸಂಬಂಧಿಸಿದ ಜಾಗತಿಕ ಚರ್ಚೆಗಳಿಂದ, ಸ್ಥಳೀಯವಾಗಿ ಮೊಳಕೆಯೊಡೆಯುತ್ತಿರುವ ತಿಳುವಳಿಕೆಗಳಿಂದ ಹಾಗೂ ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು ಮತ್ತು ದೇಶ-ವಿದೇಶಗಳ ಹೋರಾಟಗಾರರಿಂದ ವಿಭಿನ್ನ ಒಳಹುಗಳನ್ನು ಎರವಲು ಪಡೆದಿವೆ.

ಅಧ್ಯಾಯ 6ರಲ್ಲಿ, ಮುಸ್ಲಿಂ ವಿದ್ಯಾರ್ಥಿನಿಯರಿಗೆ ಶಿಕ್ಷಣವನ್ನು ನಿರಾಕರಿಸಲು ನಡೆದ ವ್ಯವಸ್ಥಿತ ಪ್ರಯತ್ನವನ್ನು ಮತ್ತು ಈ ವಿದ್ಯಾರ್ಥಿನಿಯರ ವಿರುದ್ಧ ಸಂಘಟಿತ ದ್ವೇಷ ಅಭಿಯಾನ ನಡೆದ ಬಗೆಯನ್ನು ಇಲ್ಲಿ ದಾಖಲಿಸಲಾಗಿದೆ. ಹಿಜಾಬ್ ರಾಷ್ಟ್ರವಿರೋಧಿಯೆಂದೂ, ಅದು ಹಿಂದೂಗಳಿಗೆ ಅಪಾಯವೆಂದು ಕೂಗಾಡಲು ಯುವಕರನ್ನು ಹೇಗೆ ಸಜ್ಜುಗೊಳಿಸಲಾಯಿತು, ಇದಕ್ಕಾಗಿ ಹಿಂದುತ್ವ ಸಂಘಟನೆಗಳ ಪುಂಡರ ಗುಂಪುಗಳು ಸೋಷಿಯಲ್ ಮೀಡಿಯಾ ಮತ್ತು ಕಾಲೇಜುಗಳ ವಾಟ್ಸಾಪ್ ಗುಂಪುಗಳನ್ನು ಬಳಸಿಕೊಂಡದ್ದು ಹೇಗೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ 7 ರಲ್ಲಿ ಹಿಜಾಬ್ ಮತ್ತು ಮುಸ್ಲಿಂ ವಿದ್ಯಾರ್ಥಿನಿಯರ ಬಗ್ಗೆ ಜನರ ಭಾವನೆಗಳನ್ನು ಕೆರಳಿಸುವ ಹೇಳಿಕೆಗಳನ್ನು ಮಾಧ್ಯಮಗಳು ಹೇಗೆ ಬಿತ್ತರಿಸಿದವು ಎಂಬುದನ್ನು ವಿವರಿಸಲಾಗಿದೆ. ಟಿವಿ ಮಾಧ್ಯಮಗಳು, ಅದರಲ್ಲೂ ಮುಖ್ಯವಾಗಿ ಕನ್ನಡ

ಟಿವಿ ಮಾಧ್ಯಮಗಳು ಮುಸ್ಲಿಂ ವಿದ್ಯಾರ್ಥಿನಿಯರನ್ನು ಸ್ಟೀರಿಯೊಟೈಪ್ ಮಾಡಿದವು ಹಾಗೂ ಅವರ ಸಾಂವಿಧಾನಿಕ ಹಕ್ಕುಗಳನ್ನೂ; ಮಾಧ್ಯಮಗಳು ಪಾಲಿಸಬೇಕಾದ ನೀತಿ ಸಂಹಿತೆಗಳನ್ನೂ ಸಂಪೂರ್ಣವಾಗಿ ಉಲ್ಲಂಘಿಸಿದವು.

ಅಧ್ಯಾಯ 8 ರಲ್ಲಿ ನಾಗರಿಕ ಸಮಾಜದ ಬೇರೆ ಬೇರೆ ಗುಂಪುಗಳು ಮುಸ್ಲಿಂ ವಿದ್ಯಾರ್ಥಿನಿಯರೊಂದಿಗೆ ನಿಂತ ಬಗೆಯನ್ನೂ; ಇಡೀ ಪ್ರಕರಣದಲ್ಲಿ ಸ್ಪಂದಿಸಿದ ರೀತಿಯನ್ನೂ; ಜಾತ್ಯತೀತತೆ, ಕೋಮು ಸೌಹಾರ್ದತೆ ಮತ್ತು ಶಾಂತಿಯ ಮೌಲ್ಯಗಳನ್ನು ಪ್ರತಿಪಾದಿಸಲು ಅವುಗಳು ನಡೆಸಿದ ಪ್ರಯತ್ನಗಳನ್ನೂ ದಾಖಲಿಸಲಾಗಿದೆ. ನಾಗರಿಕ ಸಮಾಜದ ಸಂಘಟನೆಗಳು ಪ್ರಕರಣದಲ್ಲಿ ಹೊರಡಿಸಲಾದ ಆದೇಶಗಳಿಂದ ಮತ್ತು ತೀರ್ಪುಗಳಿಂದ ಪ್ರಭಾವಿತರಾದ ವಿದ್ಯಾರ್ಥಿನಿಯರ ಜೊತೆ ನಿಂತವು ಮಾತ್ರವಲ್ಲದೇ ಕಾಲೇಜು ಆಡಳಿತ ಮತ್ತು ಜಿಲ್ಲಾಡಳಿತದೊಂದಿಗೆ ಅವವರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿ ಅವರಿಗೆ ಸಹಾಯ ಮಾಡಿದವು. ಆದರೆ, ಈ ರೀತ್ಯ ಕ್ರಮಗಳನ್ನು ಪ್ರಭುತ್ವವು ಪ್ರತಿಭಟನೆಗಳ ಮೇಲೆ ನಿರ್ಬಂಧಗಳನ್ನು ಹೇರುವುದರ ಮೂಲಕ; ಪ್ರತಿಭಟನೆಗಳಲ್ಲಿ ಬಳಸಬಹುದಾದ ಘೋಷಣೆ ಮತ್ತು ಸಂದೇಶಗಳ ಮೇಲೆ ನಿರ್ಬಂಧಗಳನ್ನು ಹೇರುವುದರ ಮೂಲಕ ಹಾಗೂ ಪ್ರತಿಭಟಿಸುವ ಮುಸ್ಲಿಂ ಮಹಿಳೆಯರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವ ಮೂಲಕ ಸೇರಿದಂತೆ ವಿವಿಧ ರೀತಿಗಳಲ್ಲಿ ಹತ್ತಿಕ್ಕಿತು.

ಅಧ್ಯಾಯ 9 ರಲ್ಲಿ *ರೇಶಮ್ ವಿರುದ್ಧ ಕರ್ನಾಟಕ ರಾಜ್ಯ* ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿದ ತೀರ್ಪನ್ನು ವಿಶ್ಲೇಷಿಸಲಾಗಿದೆ. ಈ ತೀರ್ಪು, ಹಿಜಾಬ್ ಅತ್ಯಗತ್ಯ ಧಾರ್ಮಿಕಾಚರಣೆ (ಎಸೆನ್ಷಿಯಲ್ ರಿಲಿಜಿಯಸ್ ಪ್ರಾಕ್ಟೀಸ್ - ERP) ಯೇ ಎಂಬ ತಪ್ಪಾದ ಪ್ರಶ್ನೆಯನ್ನು ಚರ್ಚಿಸಿತು. ಆದರೆ, ವಿದ್ಯಾರ್ಥಿನಿಯರು ತಮ್ಮ ಧರ್ಮವನ್ನು ಆಚರಿಸುವ ಮೂಲಕ ತಮ್ಮನ್ನು ತಾವು ಅಭಿವ್ಯಕ್ತಿಸಿಕೊಳ್ಳುವ ಹಕ್ಕನ್ನು ಹೊಂದಿಲ್ಲವೇ? ಮತ್ತು ಅವರ ಅಭಿವ್ಯಕ್ತಿಯನ್ನು ನಿರ್ಬಂಧಿಸಲು ಪ್ರಭುತ್ವಕ್ಕೆ ಅಧಿಕಾರವಿದೆಯೇ ಎಂಬ ಬಹುಮುಖ್ಯ ಪ್ರಶ್ನೆಗಳನ್ನು ನಿರ್ಲಕ್ಷಿಸಿತು. ಅಲ್ಲದೇ, ಈ ಅಧ್ಯಾಯವು *ಆಯಿಷತ್ ಶಿಫಾ ವಿರುದ್ಧ ಕರ್ನಾಟಕ ರಾಜ್ಯ* ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದಲ್ಲಿದ್ದ ಇಬ್ಬರು ನ್ಯಾಯಮೂರ್ತಿಗಳು ನೀಡಿದ ಎರಡೂ ತೀರ್ಪುಗಳನ್ನು ವಿಮರ್ಶಿಸುತ್ತದೆ. ನ್ಯಾಯಮೂರ್ತಿ ಹೇಮಂತ್ ಗುಪ್ತಾ ಅವರ ತೀರ್ಪು ಜನರ ಅಸ್ಮಿತೆಯನ್ನು ಅದೃಷ್ಯಗೊಳಿಸುವುದು ಜಾತ್ಯಾತೀತತೆಯನ್ನು ಎತ್ತಿಹಿಡಿಯಲು ಅವಶ್ಯ ಎಂಬ ವ್ಯಾಖ್ಯಾನವನ್ನು ಆಧರಿಸಿ ಹಿಜಾಬ್ ನಿಷೇಧವನ್ನು ಎತ್ತಿಹಿಡಿದಿದೆ. ಹಿಜಾಬ್ ಧರಿಸುವುದು ಮೂಲಭೂತ ಹಕ್ಕು ಎಂಬುದನ್ನು ಎತ್ತಿಹಿಡಿಯುತ್ತಲೇ, ಶಿಸ್ತುಪಾಲನೆಗಾಗಿ ಅದನ್ನು ನಿರ್ಬಂಧಿಸಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಹೆಣ್ಣುಮಕ್ಕಳಿಗೆ ಶಿಕ್ಷಣದಲ್ಲಿ ಸಮಾನ ಪ್ರವೇಶಾವಕಾಶದ ಹಕ್ಕನ್ನು ನಮ್ಮ ಸಾಂವಿಧಾನ ಒದಗಿಸಿದೆ. ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರ ತೀರ್ಪು ಈ ಸಾಂವಿಧಾನಿಕ ಕಾಳಜಿಯನ್ನೇ ಹೊಂದಿದೆ. ಶಿಸ್ತಗಾಗಿ ಜನರ ಘನತೆ ಮತ್ತು ಸ್ವಾಯತ್ತತೆಯನ್ನು ಕಸಿಯಬಾರದು ಎಂಬುದು ಅವರ ನಿಲುವು. ಅವರು ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪನ್ನು ಬದಿಗೆ, ಕರ್ನಾಟಕ ಸರ್ಕಾರ ಫೆಬ್ರವರಿ 5 ರಂದು ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದ್ದರೂ, ಅದಿನ್ನೂ ವಿಭಜಿತ ತೀರ್ಪಾಗಿಯೇ ಉಳಿದಿದೆ.

ಅಧ್ಯಾಯ 10 ರಲ್ಲಿ, ಆದೇಶಗಳಿಂದ, ನ್ಯಾಯಾಲಯಗಳು ನೀಡದ ತೀರ್ಪುಗಳಿಂದ ಉಂಟಾದ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಪರಿಹರಿಸಲು ಕೆಳಕಂಡವರಿಗೆ ನಿರ್ದಿಷ್ಟವಾದ ಶಿಫಾರಸುಗಳನ್ನು ನೀಡಲಾಗಿದೆ:

- ಚುನಾಯಿತ ಪ್ರತಿನಿಧಿಗಳು

- ರಾಜ್ಯ ಸರ್ಕಾರ
    - ಕಾಲೇಜು ಶಿಕ್ಷಣ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ
    - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
- ರಾಜ್ಯ ಆಯೋಗಗಳು:
    - ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
    - ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ
    - ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ
    - ಕರ್ನಾಟಕ ರಾಜ್ಯ ಮಹಿಳಾ ಆಯೋಗ,
    - ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ,
- ಮಾಧ್ಯಮಗಳು
- ನಾಗರಿಕ ಸಮಾಜ
- ಕಾಲೇಜು ಆಡಳಿತ

ಒಟ್ಟಿನಲ್ಲಿ, ಪಿಯುಸಿಎಲ್ - ಕರ್ನಾಟಕದ ಈ ಅಧ್ಯಯನವು ಆಡಳಿತಾತ್ಮಕ ಲೋಪಗಳು; ಸಾಮಾಜಿಕ-ಸಾಂಸ್ಕೃತಿಕ ಸಂಗತಿಗಳು ಹೇಗೆ ಭಯ - ಹಗೆತನ - ಅನ್ಯಾಯಗಳಿಂದ ಕೂಡಿದ ವಾತಾವರಣವನ್ನು ಉದ್ರೇಕಿಸಿದವು ಎಂಬುದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿತ್ತಾ, ಮುಸ್ಲಿಂ ವಿದ್ಯಾರ್ಥಿನಿಯರ ದನಿ ಮತ್ತು ಹೋರಾಟಗಳನ್ನು ಮುನ್ನೆಲೆಗೆ ತರಲು ಪ್ರಯತ್ನಿಸಿದೆ.